ಓ.ಎಸ್. ನಂಬರ:-41/2022

ಡಿ.ಡಬ್ಲೂ-:-3 : ಶ್ರೀ ಶೈಲ ತಂದೆ ಸಿದ್ದರಾಮಪ್ಪ ಪಾಟೀಲ್

ದಿನಾಂಕ:- 02-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

***ಮುಖ್ಯ ವಿಚಾರಣೆ:** ಶ್ರೀ. ಎಸ್ ಎಸ್ ಪಿ ವಕೀಲರಿಂದ:-*

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ ಅದರಲ್ಲಿ ಬರೆಯಲಾಗಿರುವ ಎಲ್ಲಾ ಅಂಶಗಳು ನನಗೆ ತಿಳಿದಿದ್ದು, ಸತ್ಯಾಂಶಗಳಿಂದ ಕೂಡಿರುತ್ತವೆ. ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ.

ಸಾಕ್ಷಿ ನಿಡಿ-೧ ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-೧ [ಎ] ಎಂದು ಗುರುತಿಸಲಾಯಿತು.

ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಎಸ್ ಜೆ ಜಿ ವಕೀಲರಿಂದ.

ನನ್ನ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ಜಮೀನಿನ ಸರ್ವೆ ನಂಬರ ೧೮ ಇರುತ್ತದೆ. ಅದು ೧೬ ಎಕರೆ ೧೯ ಗುಂಟೆ ಜಮೀನು ಇರುತ್ತದೆ. ನಾನು ೨೦೨೧ ರಲ್ಲಿ ನಿಡಿ-೧ ಕ್ಕೆ ಸಹಿ ಮಾಡಿರುತ್ತೇನೆ. ವಾದಿ ನಿಡಿ-೧ ರ ದಾಖಲೆಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ೨ನೇ ಪ್ರತಿವಾದಿ

ನನ್ನ ಅಣ್ಣತಮ್ಮಂದಿರಾಗಿರುವುದರಿಂದ ಹೆಣ್ಣುಮಗಳಾದ ವಾದಿಗೆ ಆಸ್ತಿ ಹೋಗಬಾರದು ಎಂದು ಉದ್ದೇಶದಿಂದ ೨ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.